ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ        ದಿನಾಂಕ : DATE : 06/03/2020

# ದೂರದೃಷ್ಟಿಯ ಬಜೆಟ್: ಸಿಎಂ

## ಸಂಪನ್ಮೂಲ ಕಡಿಮೆ ಇದ್ದರೂ ಅಭಿವೃದ್ಧಿಗಳಿಗೆ ಆದ್ಯತೆ: ಯಡಿಯೂರಪ್ಪ

• ಕನ್ನಡಪ್ರಭ ವಾರ್ತೆ ಬೆಂಗಳೂರು

ಹಿಂದಿನವರ್ಷಕ್ಕೆಹೋಲಿಸಿದರೆಸಂಪನ್ಮೂಲಕಡಿಮೆಯಾಗಿದ್ದರೂಸಹ ಆಯವ್ಯಯ ದೂರದೃಷ್ಟಿ ಹೊಂದಿದೆ. ಪ್ರಮುಖವಾಗಿ ಕೃಷಿಗೆ ಒತ್ತು ನೀಡಿ, ರೈತರ ಆರ್ಥಿಕ ಶಕ್ತಿ ಬಲಪಡಿಸುವ ಉದ್ದೇಶವನ್ನು ಹೊಂದಲಾಗಿದೆ ಎಂದು ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

ಗುರುವಾರ ಆಯವ್ಯಯ ಮಂಡನೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃಷಿಗೆ ಸಂಬಂಧಪಟ್ಟಂತೆ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ. ಪ್ರಮುಖವಾಗಿ ಭೂ ಜಲ



ಸಂರಕ್ಷಣೆಗೆ ಒತ್ತು ನೀಡಲಾಗಿದೆ. ಮಳೆ ಆಧಾರಿತ ಕೃಷಿ ಸದೃಢಕ್ಕೆ ಹಲವು ಯೋಜನೆ ಜಾರಿಗೆ ಘೋಷಿಸಲಾಗಿದೆ, ಮಹಿಳಾ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದರು.

**ಕಡಿಮೆಯಾದ ಸಂಪನ್ಮೂಲ:** ಕೇಂದ್ರ ತೆರಿಗೆಗಳಲ್ಲಿ ರಾಜ್ಯದ ಪಾಲು ಕಡಿಮೆಯಾಗಿರುವುದರಿಂದ 8,887 ಕೋಟಿ ರು. ಕಡಿತವಾಗಿದೆ. ಇದರಿಂದ ರಾಜ್ಯದ ರಾಜಸ್ವ ಸಂಪನ್ಮೂಲ ಇಳಿಕೆಯಾಗಿದೆ. ಅಲ್ಲದೇ ಕೇಂದ್ರ ಸರ್ಕಾರದಿಂದ ಬರಬೇಕಾದ ಜಿಎಸ್‌ಟಿ ಪರಿಹಾರದ ಮೊತ್ತ ಅಂದಾಜು ಮೂರು ಸಾವಿರ ಕಡಿತವಾಗಲಿದೆ, ಇದರಿಂದ ಒಟ್ಟಾರೆ ಸುಮಾರು12ಸಾವಿರಕೋಟಿರು. ಕಡಿಮೆಆಗಲಿದೆ. ಹೀಗಾಗಿಬಜೆಟ್ ಗಾತ್ರ ಕಳೆದ ವರ್ಷಕ್ಕೆ ಹೋಲಿಸಿದರೆ 3,740 ಕೋಟಿ ರು. ಮಾತ್ರ ಹೆಚ್ಚಾಗಿದೆ. ರಾಜ್ಯದಆರ್ಥಿಕಪರಿಸ್ಥಿತಿಯಾವುದನ್ನುಮುಚ್ಚಿಟ್ಟುಕೊಳ್ಳದೇ ಆಯ-ವ್ಯಯದಲ್ಲಿಎಲ್ಲವನ್ನುಹೇಳಿದ್ದೇನೆಎಂದುಮುಖ್ಯಮಂತ್ರಿಗಳು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

15ನೇಹಣಕಾಸುಆಯೋಗದಹಂಚಿಕೆಯಿಂದಾಗಿಕಳೆದವರ್ಷದ ಆಯವ್ಯಯಕ್ಕೆ ಹೋಲಿಸಿದರೆ, 2020-21ರ ಆಯವ್ಯಯದಲ್ಲಿ ಕೇಂದ್ರದತೆರಿಗೆಯಲ್ಲಿನ ರಾಜ್ಯದ ಪಾಲಿನಲ್ಲಿ 11,215 ಕೋಟಿ ರು. ಕಡಿಮೆಯಾಗಿದೆ ಎಂದು ತಿಳಿಸಿದರು.

### ನಷ್ಟ ಭರ್ತಿಗೆ 13ಕ್ಕೆ ಕೇಂದ್ರಕ್ಕೆ ಮೊರೆ

15ನೇ ಹಣಕಾಸು ಆಯೋಗ ಶಿಫಾರಸು ಮಾಡಿದ ಹಂಚಿಕೆಯಿಂದ ಕೇಂದ್ರದ ತೆರಿಗೆಯಲ್ಲಿನ ರಾಜ್ಯದ ಪಾಲು ಕಡಿಮೆಯಾಗಿರುವುದರಿಂದ, 2020-21ನೇ ಸಾಲಿನಲ್ಲಿ ರಾಜ್ಯಕ್ಕೆ ಆಗಿರುವ ನಷ್ಟ ಸರಿಪಡಿಸಲು ಹಾಗೂ ಮುಂದಿನ ವರ್ಷದಿಂದ ಹೆಚ್ಚಿನ ಹಣಕಾಸಿನ ಹಂಚಿಕೆ ಮಾಡುವಂತೆ ಈ ತಿಂಗಳು 13 ರಂದು ನಡೆಯಲಿರುವ 15ನೇ ಹಣಕಾಸು ಆಯೋಗದ ಸಭೆಯಲ್ಲಿ ರಾಜ್ಯ ಸರ್ಕಾರ ಮನವಿ ಸಲ್ಲಿಸಲಿದೆ. ರಾಜ್ಯದ ಪರವಾಗಿ ಗೃಹ ಸಚಿವ ಬಸವರಾಜ ಬೊಮ್ಮಾಯಿ ಸಭೆಯಲ್ಲಿ ಭಾಗವಹಿಸಿ ಮನವಿ ನೀಡಲಿದ್ದಾರೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

**ಇತಿಮಿತಿಯಲ್ಲಿ ಸಾಲ:** ರಾಜ್ಯ ಸರ್ಕಾರ 'ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ'ಕ್ಕೆ ಬದ್ಧವಾಗಿ ಸಾಲವನ್ನು ಮಾಡಿದೆ ಸಾಲದ ಮಿತಿ ರಾಜ್ಯದ ಜಿಡಿಪಿಯ ಶೇ.3ರೊಳಗೆ ಇರಬೇಕು. ಕಳೆದ ವರ್ಷಶೇ.2.4ರಷ್ಟುಇದ್ದದ್ದು2020-21ಸಾಲಿನಲ್ಲಿಶೇ.2.5ರಷ್ಟಾಗಿದೆ ಎಂದರು.

ಏತ ನೀರಾವರಿ ಯೋಜನೆಗೆ ಐದು ಸಾವಿರ ಕೋಟಿ ರು. ಕಳಸಾ-ಬಂಡೂರಿ ಯೋಜನೆಗೆ 500 ಕೋಟಿ ರು. ಎತ್ತಿನ ಹೊಳೆ ಯೋಜನೆಗೆ 1500 ಕೋಟಿ ರು. ನಿಗದಿಪಡಿಸಲಾಗಿದೆ, ಪ್ರವಾಸೋದ್ಯಮಕ್ಕೆ ಹೆಚ್ಚಿನ ಆದ್ಯತೆ ನೀಡಿ 500 ಕೋಟಿ ರು. ನೀಡಲಾಗಿದೆ. ತೋಟಗಾರಿಕೆಗೆ ಒತ್ತು ನೀಡಲಾಗಿದೆ, ಒಟ್ಟಾರೆ ನೀರಾವರಿಗೆ 21,238 ಕೋಟಿ ರು. ನಿಗದಿ ಮಾಡಲಾಗಿದೆ ಎಂದು ಅಂಕಿ-ಅಂಶಗಳ ಸಹಿತ ವಿವರಿಸಿದರು.

ಈ ವೇಳೆ ಸಚಿವರಾದ ಜೆ.ಸಿ. ಮಾಧುಸ್ವಾಮಿ, ಬಸವರಾಜ ಬೊಮ್ಮಾಯಿ ಹಾಗೂ ಆರ್ಥಿಕ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.